ಶ್ರೀ ಬಾಪುಗೌಡ ರಾಯಪ್ಪ.—ಈ ಯೋಜನೆಯಿಂದ ಹೆಚ್ಚು ಪ್ರಮಾಣದ ನೀರು ಯಾವ ತಾಲ್ಲೂಕಿಗೆ ಬರುತ್ತದೆ ?

ಶ್ರೀ ಎಚ್. ಎನ್. ನಂಜೇಗೌಡ.—ಆ ವಿವರಗಳು ಈಗ ನನ್ನ ಹತ್ತಿರ ಇಲ್ಲ. ಪರಿಶೀಲನೆಯಾಗಿ ಬಂದನಂತರ ವಿವರಗಳನ್ನು ಹೇಳುತ್ತೇನೆ.

Sri PRABHAKER TELKAR.— If the Plan is submitted to the Government, can the Hon'ble Minister say within what period the project will be completed ?

ಶ್ರೀ ಎಚ್. ಎನ್. ನಂಜೇಗೌಡ.—ಕೃಷ್ಣಾ ನದೀ ನೀರಿನ ಹಂಚಿಕೆಯ ವ್ಯವಹಾರ ಈಗ ಟ್ರಿಬ್ಯುನಲ್ ಮುಂದೆ ಇದೆ. ಅಲ್ಲಿಂದ ತೀರ್ಮಾನ ಬಂದನಂತರ ಇದನ್ನು ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ಪರಿಶೀಲನೆ ಮಾಡಿ ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಅದನ್ನು ತೆಗೆದು ಕೊಳ್ಳಬೇಕಾಗುತ್ತದೆ. ಆದ್ದರಿಂದ ಆ ಬಗ್ಗೆ ಈಗಲೇ ಏನೂ ಹೇಳುವುದಕ್ಕಾಗುವುದಿಲ್ಲ.

Sri B. D. KALMANKAR.—In view of the fact that Gulbarga District is a drought-affected District and there are no major projects coming up in the near future, I wish to know whether the Government will give top priority to this Project and see that this is taken up at the earliest.

Sri H. N. NANJE GOWDA.—I share the feelings of the hon. member.

ಅಧ್ಯಕ್ಷರು.—256ನೇ ಪ್ರಶ್ನೆಯ ಮೇಲೆ ಉಪ-ಪ್ರಶ್ನೆಗಳನ್ನು ಕೇಳಬಹುದು.

Common Wells in all Villages of the State

256. **Sri H. LINGA REDDY** (Karugodu). —

Will the Minister for Community Development and Social Welfare be pleased to state :—

(*a*) the number of rigs allotted to each district in the State ;

(*b*) the number of wells dug up so far and the number of villages without drinking water facilities in Bellary District ;

(*c*) the period required to provide water facilities in all the villages of Bellary District in particular and in the State in general;

(*d*) whether Government have taken any steps to provide common wells to all the communities in villages, if so, the names of such villages ;

(*e*) if not, whether there is any proposal before Government to provide common wells with an over-head tank and taps in all villages ?

Sri M. MALLIKARJUNASWAMY (Minister for Community Development and Social Welfare).—

(a) Bangalore	...	1
Kolar	...	2
Tumkur	...	1
Chitradurga	...	2
Shimoga	...	—
Mysore	...	1
Mandya	...	1
Hassan	...	1
Chickmagalur	...	1
South Kanara	...	Nil
Coorg	...	Nil
Belgaum	...	1
Bijapur	...	1
Dharwar	...	1
North Kanara	...	Nil
Gulbarga	...	2
Bidar	...	2
Raichur	...	1
Bellary	...	1
	Total :	19

(b) (i) 19 bore wells under 64 Famine Relief.

(ii) There are 5 villages and 2 hamlets without drinking water wells.

(c) During this year.

(d) The wells that are being provided in every village are common wells to all the communities. Wherever the Harijan Colonies are situated at a distance from the main villages, separate wells are being provided.

(e) Does not arise.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ರಾಜ್ಯದಲ್ಲಿ ಬಾವಿಗಳನ್ನು ತೋಡುವ ಸಲುವಾಗಿ ಕೆಲವೇ ಜಿಲ್ಲೆಗಳಿಗೆ ಮಾತ್ರ ರಿಗ್ಸ್‌ಗಳನ್ನು ಒದಗಿಸಿದ್ದೀರಿ, ಶಿವಮೊಗ್ಗ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲರ್‌ಗಳವರು ಒಂದು ನಿರ್ಣಯವನ್ನು ಮಾಡಿ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 76 ಹಳ್ಳಿಗಳು ಕ್ಷಾಮಪೀಡಿತ ಪ್ರದೇಶಗಳಾಗಿವೆ, ಆ ಪ್ರದೇಶಕ್ಕೆ ಕುಡಿಯುವ ನೀರನ್ನು ಒದಗಿಸಲು ಬಾವಿಗಳನ್ನು ಜಾಗ್ರತೆಯಾಗಿ ತೋಡುವ ದೃಷ್ಟಿಯಿಂದ ರಿಗ್ಸ್‌ಗಳನ್ನು ಕಳುಹಿಸಿಕೊಡಬೇಕೆಂದು ಆ ನಿರ್ಣಯವನ್ನು ತಮಗೆ ಕಳುಹಿಸಿ 10 ದಿವಸಗಳಮೇಲೆ ಆಯಿತು. ಆದರೂ ಸಹ ಅಲ್ಲಿಗೆ ರಿಗ್ಸ್ ಗಳನ್ನು ಕೊಟ್ಟಿಲ್ಲ. ಆದ್ದರಿಂದ ಈಗಲಾದರೂ ಅಲ್ಲಿಗೆ ರಿಗ್ಸ್‌ಗಳನ್ನು ಕಳುಹಿಸಿಕೊಡುವ ಏರ್ಪಾಡು ಮಾಡುತ್ತೀರಾ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಜಿಲ್ಲಾಧಿಕಾರಿಗಳಿಂದ ನಮಗೆ ವರದಿ ಬಂದಮೇಲೆ ಆ ಬಗ್ಗೆ ಸೂಕ್ತ ಕ್ರಮತೆಗೆದುಕೊಂಡು ಅದನ್ನು ಒದಗಿಸಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಜಿಲ್ಲಾಧಿಕಾರಿಗಳಿಂದ ಇನ್ನೂ ವರದಿ ಬಂದಿಲ್ಲ ಎಂದು ತಾವು ಹೇಳಿದಿರಿ. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ಅಲ್ಲಿಗೆ ತುರ್ತಾಗಿ ರಿಗ್ಸ್‌ಗಳನ್ನು ಕಳುಹಿಸಿ ಕೊಡಬೇಕೆಂದು ಒಂದು ನಿರ್ಣಯವನ್ನು ಮಾಡಿ ತಮಗೆ ಕಳುಹಿಸಿದ್ದಾರೆ. ಆದ್ದರಿಂದ ಅದನ್ನು ಅತ್ಯಂತ ಶೀಘ್ರವಾಗಿ ಶಿವಮೊಗ್ಗಾಕ್ಕೆ ಕಳುಹಿಸಿ ಕೊಡಿಬೇಕು. ಇಲ್ಲವಾದ್ದರೆ ತೊಂದರೆಯಾಗುತ್ತದೆ. ಈ ವಿಷಯವನ್ನು ತಾವು ಗಮನದಲ್ಲಿಟ್ಟುಕೊಂಡು ಶಿವಮೊಗ್ಗಾ ಜಿಲ್ಲೆಗೆ ಜರೂರಾಗಿ ರಿಗ್ಸ್‌ಗಳನ್ನು ಕಳುಹಿಸಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಖಂಡಿತವಾಗಿಯೂ ಆ ವಿಷಯಕ್ಕೆ ನಾವು ಗಮನ ಕೊಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಈಗ ತಾವು ಹಾಸನ ಜಿಲ್ಲೆಗೆ ಕೊಟ್ಟಿರತಕ್ಕಂಥಾ ರಿಗ್ಸ್ ಕೆಟ್ಟುಹೋಗಿದೆ; ಅವು ಕೆಲಸ ಮಾಡುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಆದ್ದರಿಂದ ಅಲ್ಲಿಗೆ ತಕ್ಷಣ ಯಾವುದಾದರೂ ರಿಗ್ಸ್ ಮೆಷೀನ ಅನ್ನು ಕಳುಹಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ.—ತಾವು ಉತ್ತರ ಕೊಡಬೇಕಾದರೆ ಖಂಡತುಂಡವಾಗಿ ಉತ್ತರ ಕೊಡುತ್ತೀರಿ; ಬಹಳ ಸಂತೋಷ. ಈ ಒಂದು ಪ್ರಶ್ನೆಯನ್ನು ಶೀಘ್ರವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ಬಹುಶಃ ಅದರ ಮೇಲೆ ನಾಳೆಯೇ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಅಥವಾ ಮಾತಿನಲ್ಲಿಯೇ ನಿಲ್ಲುತ್ತದೆಯೇ ?

12-30 P.M.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—1971ನೇ ಇಸವಿಯ ಮಧ್ಯ ಭಾಗದಲ್ಲಿ ಸುಮಾರು 15 ಜಿಲ್ಲೆಗಳಲ್ಲಿ ನೀರಿನ ಅಭಾವ ಇತ್ತೆಂದು ತೋರಿ ಬಂದಾಗ ಈ ರಿಗ್ಸ್ ಮುಖಾಂತರ ಸುಮಾರು 664 ಬಾವಿಗಳನ್ನು ತೋಡಿಸಬೇಕೆಂದು ಜಿಲ್ಲಾಧಿಕಾರಿಗಳು ಶಿಫಾರಸು ಮಾಡಿದ್ದಾರೆ. ಅದರ ಪ್ರಕಾರ ಈ ರಿಗ್ಸ್‌ಗಳನ್ನು ಓಡಗಿಸಿದ್ದೇವೆ. ಯೂನಿಸೆಫ್‌ನಿಂದ ಒಂದು ರಿಗ್ ನಮಗೆ ಬರಬೇಕಾಗಿತ್ತು ಎಂದು ನಾನು ಮೊನ್ನೆ ತಾನೇ ಹೇಳಿದೆ ಕೇಂದ್ರ ಸರ್ಕಾರವನ್ನು ಈ ವಿಚಾರದಲ್ಲಿ ಈಗಾಗಲೇ ಮೂವ್ ಮಾಡಿದ್ದೇವೆ.

ಶ್ರೀ ಡಿ. ನಾರಾಯಣದಾಸ್.—ಬಳ್ಳಾರಿ ಜಿಲ್ಲೆಗೆ ಒಂದು ರಿಗ್ ಕಳಿಸಿದ ಮೇಲೆ ಅದು ಕೆಟ್ಟು ಹೋಗಿದೆ. ಅದನ್ನು ಏನಾದರೂ ರಿಪೇರಿ ಮಾಡಿ ಪುನಃ ಸರಿಪಡಿಸಿದ್ದೀರಾ ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ಸುಮಾರು 68 ದಿವಸ ಮಾತ್ರ ಅದು ಕೆಲಸ ಮಾಡಿದೆ. 146 ದಿವಸ ರಿಪೇರಿಯಲ್ಲಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಉತ್ತರದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ 'ನಿಲ್' ಎಂದು ಹೇಳಿದ್ದೀರಿ. ಅಂದರೆ ಅಲ್ಲಿ ನೀರಿನ ಸರಬರಾಜು ಆಗಿಬಿಟ್ಟಿದೆ, ಇನ್ನು ಏನೂ ಬೇಕಾಗಿಲ್ಲವೆಂದು ಅರ್ಥವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಲ್ಲಿಂದ ಬೇಡಿಕೆಗಳು ಬಂದಿಲ್ಲ.

ಶ್ರೀ ಎಚ್. ಮಾರೇಗೌಡ.—ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ರಿಗ್‌ಗಳನ್ನು ಕೊಟ್ಟಿದ್ದೀರಿ ಮತ್ತು ಎಷ್ಟು ಕೆಲಸ ಆಗಿದೆ ನಿಂತು ಹೋಗಿವೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ, ಇದು ಬಳ್ಳಾರಿಗೆ ಮಾತ್ರ ಸಂಬಂಧಪಟ್ಟದ್ದು.

ಶ್ರೀ ಎಫ್. ಎಸ್. ತಾವರೆ.—ಇವತ್ತು ಸರ್ಕಾರದವರು ಎಲ್ಲವನ್ನೂ ಹೊರಗಿನ ದೇಶದಿಂದ ತರಿಸುತ್ತಿದ್ದಾರೆಂದು ಕಾಣುತ್ತದೆ. ಒಂದು ಸಣ್ಣ ಮೂಳೆ ಮುರಿದರೂ ಅದನ್ನು ಪರದೇಶಗಳಿಂದ ತರಿಸುವಂತಹ ಪರಿಸ್ಥಿತಿಯಲ್ಲಿದ್ದೇವೆ. ಸಾವೇರಿ ತಾಲ್ಲೂಕಿನಲ್ಲಿ ಒಂದು ಯಂತ್ರ ಮುರಿದು ಒಂದು ತಿಂಗಳಾಯಿತು. ಅದನ್ನು ರಿಪೇರಿ ಮಾಡಲು ಇನ್ನೂ ಸಾಮಾನು ಬರುವ ಹಾಗೆಯೇ ನಿಂತಿದೆ. ಆದ್ದರಿಂದ ಸರ್ಕಾರದವರು ಬೇಕಾದಂತಹ ಸ್ಪೇರ್ ಪಾರ್ಟ್‌ಗಳನ್ನು ತಂದು ಸ್ಟಾಕ್‌ನಲ್ಲಿಟ್ಟು

ಕೊಳ್ಳುವುದು ಅವಶ್ಯವಾಗಿದೆ. ಆ ರೀತಿ ಮಾಡಿ ಕೆಟ್ಟ ಯಂತ್ರಗಳನ್ನು ಸರಿಪಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಬಳ್ಳಾರಿ ಜಿಲ್ಲೆಯಲ್ಲಿ ಒಂದು ಯಂತ್ರ ಕೆಟ್ಟು ಹೋಗಿದೆ. ಅಲ್ಲಿನ ಜಿಲ್ಲಾಧಿಕಾರಿಗಳು ಅರ್ಜೆಂಟಾಗಿ ಎರಡು ಮಾನವಿಗಳನ್ನು ಇದರ ಬಗ್ಗೆ ಸರ್ಕಾರಕ್ಕೆ ಕಳುಹಿಸಿ ಬೇರೆ ರಿಗ್ ಒದಗಿಸಿಕೊಡಬೇಕೆಂದು ಕೇಳಿಕೊಂಡಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನವಿಗಳು ಬಂದಿವೆ. ಆದರೆ ಸರ್ಕಾರದಲ್ಲಿ ರಿಗ್ಸ್ ಇಲ್ಲ. ಇರತಕ್ಕಂತಹ ರಿಗ್‌ಗಳು ರಾಜ್ಯಾದ್ಯಂತ ಬೇರೆ ಬೇರೆ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿವೆ.

ಶ್ರೀ ಎಚ್. ಎಸ್ ಸಿದ್ದಪ್ಪ.—ಉತ್ತರದಲ್ಲಿ 19 ರಿಗ್‌ಗಳನ್ನು ಒದಗಿಸಿದ್ದೇವೆಂದು ಹೇಳಿದ್ದೀರಿ. ಈ 19ರಲ್ಲಿ ಕೆಲಸ ಮಾಡುತ್ತಾ ಇರುವುದು ಎಷ್ಟು ? ಕೆಲಸ ಮಾಡದೆ ಇರುವುದು ಎಷ್ಟು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಒಂದೆರಡು ಬಿಟ್ಟು ಉಳಿದವುಗಳೆಲ್ಲ ಕೆಲಸ ಮಾಡುತ್ತಿವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಅಸ್ಪೃಶ್ಯತೆಯ ಜಾಡ್ಯದಿಂದ ಸಾರ್ವಜನಿಕ ಬಾವಿಗಳನ್ನು ತೋಡಿದರೂ ಅಲ್ಲಿ ಹರಿಜನರಿಗೆ ಪ್ರವೇಶವಿಲ್ಲ. ಆದ್ದರಿಂದ ಸಾರ್ವಜನಿಕರಿಂದ ಈ ಜನರಿಗೆ ಮಾನ್ಯತೆ ಕೊಡುವುದರ ಬಗ್ಗೆ ಸರ್ಕಾರದವರು ಹಾಕಿಕೊಂಡ ರಚನಾತ್ಮಕವಾದ ಯೋಜನೆಗಳು ಯಾವುವು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಾರ್ವಜನಿಕ ಬಾವಿಗಳನ್ನು ಕೊಟ್ಟು ಅದನ್ನು ಹರಿಜನರು ಮತ್ತು ಇತರರೂ ಉಪಯೋಗಿಸುವಂತೆ ಮಾಡಿದ್ದೇವೆ. ಸವರ್ಣೀಯ ಹಿಂದುಗಳು ಇಲ್ಲದ ಕಡೆ ಹರಿಜನರು ಹೆಚ್ಚಾಗಿರುವ ಕಡೆ ಪ್ರತ್ಯೇಕವಾದ ಬಾವಿಗಳನ್ನು ತೆಗೆಸಿದ್ದೇವೆ. ಅಲ್ಲಿಂದಲೂ ಅವರು ನೀರನ್ನು ತೆಗೆದುಕೊಳ್ಳಬಹುದು.

ಶ್ರೀ ಪಿ. ಎಂ. ಬಂಗಿ.—ನಮ್ಮ ಬಿಜಾಪುರ ಜಿಲ್ಲೆಗೆ ಇನ್ನೊಂದು ರಿಗ್‌ನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬಿಜಾಪುರ ಜಿಲ್ಲೆಗೆ ಇನ್ನೊಂದು ರಿಗ್‌ನ್ನು ಕೊಡ ತಕ್ಕದ್ದು ಅವಶ್ಯವಿದೆ. ಅದೂ ಅಲ್ಲದೆ ಆ ಜಿಲ್ಲೆ 6—7 ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿರ ತಕ್ಕಂತಹ ಪ್ರದೇಶ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಇ. ರಾಮಯ್ಯ.—(ಅ)ಕ್ಕೆ ಉತ್ತರವಾಗಿ 5 ಗ್ರಾಮಗಳಲ್ಲಿ ಮತ್ತು ಎರಡು ಕೊಪ್ಪಲುಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲವೆಂದು ಹೇಳಿದ್ದೀರಿ. ಆದ್ದರಿಂದ ಈ ವರ್ಷವಾದರೂ ಪ್ರತಿಯೊಂದು ಹಳ್ಳಿಗೂ ಒಂದೊಂದು ಬಾವಿಯನ್ನು ತೋಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದರ ಬಗ್ಗೆ ಸಮಗ್ರವಾದ ಯೋಜನೆಯನ್ನು ಹಾಕಿ ಕೊಂಡಿದ್ದೇವೆ. ಈ ವರ್ಷದ ಅಂತ್ಯದಲ್ಲಿ ಅಂದರೆ ನಾಲ್ಕನೆಯ ಯೋಜನೆಯೊಳಗೆ ಎಲ್ಲಾ ಹಳ್ಳಿಗಳಿಗೆ ಮತ್ತು ಕೊಪ್ಪಲುಗಳಿಗೆ ಬಾವಿಗಳನ್ನು ತೋಡಿಸಿಕೊಡುವ ಯೋಜನೆಗಳನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ.

ಶ್ರೀ ವಿ. ಎನ್. ಪಾಟೀಲ್.—ತಾವು ಹರಿಜನರು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಸಾರ್ವಜನಿಕ ಬಾವಿಗಳನ್ನು ಉಪಯೋಗಿಸಿಕೊಳ್ಳಬಹುದು ಎಂದು ಹೇಳಿದಿರಿ. ಇವತ್ತು ನಮ್ಮ ರಾಜ್ಯದಲ್ಲಿ ಎಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ; ಎಷ್ಟು ರಿಗ್‌ಗಳನ್ನು ಇದಕ್ಕೋಸ್ಕರ ಒದಗಿಸಬೇಕಾಗುತ್ತದೆ ಮತ್ತು ಇವುಗಳನ್ನು ಎಷ್ಟು ವರ್ಷದಲ್ಲಿ ಮಾಡುತ್ತೀರಿ ಎಂಬುದರ ಬಗ್ಗೆ ಏನಾದರೂ ಸರ್ವೆ ಮಾಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಮಾಡುವುದಕ್ಕೆ ಸಾಧ್ಯವಿದೆ. ಮತ್ತು ರಿಗ್ ಮುಖಾಂತರ ಬಾವಿಗಳನ್ನು ತೆಗೆದು, ಅದಕ್ಕೆ ಹ್ಯಾಂಡ್ ಪಂಪ್ ಹಾಕಿ, ಅದರಿಂದ ಹರಿಜನರು ಮತ್ತು ಸವರ್ಣೀಯರು ಒಂದೇ ಕಡೆ ನೀರು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡಿದರೆ, ಇದು ಅಸ್ಪೃಶ್ಯತೆಯ ನಿರ್ಮೂಲನದ ವಿಚಾರದಲ್ಲಿ ಒಂದು ರಿವೊಲ್ಯೂಶನ್ ಮಾಡಿದಂತಾಗುತ್ತದೆ.